# ಸಹ್ಯಾದ್ರಿಯ ತಪ್ಪಲಲ್ಲಿ ಗುಹಾಘರ್

ಸುಂದರ ಕಡಲತೀರಗಳು, ಮನ ಸೆಳೆಯುವ ಬೆಟ್ಟಗುಡ್ಡಗಳು, ಭಕ್ತಿ ಉಕ್ಕಿಸುವ ದೇವಾಲಯಗಳು– ಎಲ್ಲವೂ ಒಂದೆಡೆ ಮೇಳೈಸಿರುವ ಪ್ರವಾಸಿ ತಾಣ ಈ ಗುಹಾಘರ್.

ಚಿತ್ರ– ಲೇಖನ:
**ಸುಬ್ಬರಾವ್ ಎನ್.ಕೆ.**

ಮಹಾರಾಷ್ಟ್ರದ ದಕ್ಷಿಣ ಭಾಗದಲ್ಲಿ ಸಹ್ಯಾದ್ರಿ ಪರ್ವತ ಶ್ರೇಣಿಯ ಅತ್ಯಂತ ಸುಂದರ ಮತ್ತು ರಮಣೀಯ ತಾಣವೇ ರತ್ನಗಿರಿ. ಛತ್ರಪತಿ ಶಿವಾಜಿ ಮಹಾರಾಜ ಹಾಗೂ ಪೇಶ್ವೆಗಳ ಆಡಳಿತಕ್ಕೆ ಒಳಪಟ್ಟ ಈ ಪ್ರದೇಶವು ಅನೇಕ ಐತಿಹಾಸಿಕ ಸ್ಥಳಗಳು ಮತ್ತು ಸ್ಮಾರಕಗಳನ್ನು ಹೊಂದಿದ್ದು ಭಾರತದ ಶ್ರೀಮಂತ ಸಂಸ್ಕೃತಿಯನ್ನು ಪ್ರತಿನಿಧಿಸುತ್ತಿದೆ. ಈ ಸ್ಥಳವು ವರ್ಷಪೂರ್ತಿ ಹಿತಕರವಾದ ಮತ್ತು ಆಹ್ಲಾದಕರವಾದ ಹವಾಮಾನದಿಂದ ಕೂಡಿದ್ದು ಸದಾ ಕಾಲವೂ ಪ್ರವಾಸಿಗರಿಂದ ತುಂಬಿರುತ್ತದೆ. ಅಸಂಖ್ಯಾತ ಕೆರೆಗಳು, ಕಡಲತೀರಗಳು ಮತ್ತು ಶಿಲಾಪರ್ವತದಿಂದ ಕೂಡಿರುವ ಈ ಪ್ರದೇಶ, ಪ್ರಕೃತಿಪ್ರಿಯರ ನೆಚ್ಚಿನ ತಾಣವಾಗಿದೆ.

ರತ್ನಗಿರಿ ಜಿಲ್ಲೆಯಲ್ಲಿರುವ ಗುಹಾಘರ್ ಪಟ್ಟಣವೂ ಸುಂದರ ಕಡಲತೀರಗಳು ಮತ್ತು ಹಲವು ಯಾತ್ರಾಕ್ಷೇತ್ರಗಳನ್ನು ಹೊಂದಿದೆ. ಸ್ಥಳೀಯ ಭಾಷೆಯಲ್ಲಿ ಗುಹಾಘರ್ ಎಂದರೆ ಗುಹೆಗಳಿರುವ ಮನೆ ಎಂದರ್ಥ. ಗುಹಾಘರ್ ಕಡಲ ತಡಿಯಲ್ಲಿ ಕಾಣುವ ರಮಣೀಯ ಸೂರ್ಯಾಸ್ತ ಹಾಗೂ ಇಲ್ಲಿರುವ ಕಡಲ ತೀರದಲ್ಲಿ ನಡೆಸಲಾಗುವ ಹಲವಾರು ಜಲಕ್ರೀಡೆಗಳು ದಿನವಿಡೀ ಬೀಚ್‌ನಲ್ಲಿ ಕಾಲ ಕಳೆಯುವವರಿಗೆ ಮುದ ನೀಡುವ ಪ್ರವಾಸಿ ಆಕರ್ಷಣೆಯಾಗಿದೆ.

ಇಲ್ಲಿನ ಕೆಲವೊಂದು ಕಡಲ ತೀರಗಳು 6 ಕಿ.ಮೀ ಗಿಂತಲೂ ಉದ್ದವಾಗಿದ್ದು ಇಲ್ಲಿರುವ ಮರಳಿನಲ್ಲಿ ಜಟಕಾ ಬಂಡಿ ಸವಾರಿ ಹಾಗೂ ಒಂಟೆ ಸವಾರಿ ಒಂದು ವಿಶಿಷ್ಟ ಅನುಭವ ನೀಡುತ್ತದೆ. ಒಂದು ಕಡೆ ಎತ್ತರವಾದ ಪರ್ವತಗಳಿದ್ದರೆ ಇನ್ನೊಂದೆಡೆ ಉದ್ದನೆಯ ಕಡಲತೀರಗಳು. ಈ ಕಡಲ ತೀರಗಳಿಗೆ ಅಂಟಿಕೊಂಡಂತಿರುವ ತೆಂಗು, ಅಡಿಕೆ ಹಾಗೂ ಅಲ್ಫಾಂಜೋ ಮಾವಿನ ತೋಪುಗಳು ಎಂಥವರನ್ನೂ ಮಂತ್ರಮುಗ್ಧಗೊಳಿಸುತ್ತವೆ. ಹಚ್ಚ ಹಸಿರಿನಿಂದ ಕೂಡಿದ ಪ್ರಕೃತಿ ಸೌಂದರ್ಯ ಮನಸ್ಸಿಗೆ ಮುದ ನೀಡುತ್ತದೆ. ಆಧುನಿಕತೆಯ ದಾಳಿಗೆ ಒಳಗಾಗದೆ ಹಳ್ಳಿಗಾಡಿನ ಪ್ರಕೃತಿ ಸೌಂದರ್ಯವನ್ನು ಇನ್ನೂ ಉಳಿಸಿಕೊಂಡಿರುವ ಪ್ರಶಾಂತ ತಾಣ ಗುಹಾಘರ್. ಬುದಾಲ್ ಕಡಲ ತೀರ ಅತ್ಯಂತ ಹೆಚ್ಚು ಆಕರ್ಷಕವಾಗಿದ್ದು, ತೀರದಲ್ಲಿ ದೊಡ್ಡ ಬಂಡೆಕಲ್ಲುಗಳಿಂದ ಆವೃತ್ತವಾಗಿದ್ದು ರಮಣೀಯವೂ, ಪ್ರಶಾಂತವೂ ಆಗಿದೆ.



ಗುಹಾಘರ್ ಪಟ್ಟಣವನ್ನು ದೇವಾಲಯಗಳ ನಗರಿ ಎಂದೂ ಕರೆಯಲಾಗುತ್ತದೆ. ಹೀಗೆ ಕರೆಯಲು ಕಾರಣ ಇಲ್ಲಿರುವ ಅನೇಕ ಹಿಂದೂ ದೇವಾಲಯಗಳು. ಶಿವನಿಗೆ ಅರ್ಪಿತವಾಗಿರುವ ಬಾಲಕೇಶ್ವರ, ಉದಾಲೇಶ್ವರ, ವ್ಯೆದೇಶ್ವರ, ವಲ್ಗೇಶ್ವರ ಮತ್ತು ತಾಳಕೇಶ್ವರ– ಹೀಗೆ ಹಲವಾರು ಪುರಾತನ ಶಿವ ದೇವಾಲಯಗಳಿವೆ. ಈ ದೇವಾಲಯಗಳನ್ನು ಸಂದರ್ಶಿಸಲು ವರ್ಷಪೂರ್ತಿ ಯಾತ್ರಾರ್ಥಿಗಳು ತುಂಬಿರುತ್ತಾರೆ. ಪಟ್ಟಣದಲ್ಲಿ ಶಿವನ ದೇವಾಲಯಗಳ ಜೊತೆಗೆ ಗಣೇಶ, ಚಂಡಿಕಾ ದೇವಿ, ದಶಭುಜ, ಲಕ್ಷ್ಮೀ, ಗಣೇಶ ಹೀಗೆ ಇತರ ದೇವತೆಗಳ ಸಾಕಷ್ಟು ದೇವಾಲಯಗಳೂ ಇವೆ. ಆದ್ದರಿಂದ ಗುಹಾಘರ್ ಬರಿ ಪ್ರಕೃತಿಪ್ರಿಯರಿಗೆ ಮಾತ್ರವಲ್ಲ ಯಾತ್ರಾರ್ಥಿಗಳಿಗೂ ಮೆಚ್ಚಿನ ತಾಣವಾಗಿದೆ.

ಪುರಾತನ ದೇವಾಲಯಗಳು, ಹಚ್ಚಹಸಿರಿನ ಪ್ರಕೃತಿ ಸೌಂದರ್ಯ ಮತ್ತು ಸುಂದರ ಕಡಲತೀರಗಳು ಒಂದೇ ಕಡೆ ಮೇಳೈಸಿರುವುದು ಗುಹಾಘರ್ ಪಟ್ಟಣದ ಪ್ರವಾಸಿ ಮಹತ್ವವನ್ನು ಹೆಚ್ಚಿಸಿದೆ.

ತಲುಪುವ ಮಾರ್ಗ: ಗುಹಾಘರ್‌ಗೆ ರಸ್ತೆ ಮಾರ್ಗ, ರೈಲು ಮಾರ್ಗ ಮತ್ತು ವಿಮಾನ ಮಾರ್ಗವಾಗಿ ಸುಲಭವಾಗಿ ತಲುಪಬಹುದು. ವಿಮಾನದ ಮೂಲಕ ಬರುವವರಿಗೆ ಮುಂಬೈಯ ಛತ್ರಪತಿ ಶಿವಾಜಿ ಮಹಾರಾಜ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಅತ್ಯಂತ ಹತ್ತಿರದ ನಿಲ್ದಾಣವಾಗಿದೆ. ಹತ್ತಿರದ ರೈಲು ನಿಲ್ದಾಣ ಚಿಪ್ಲುನ್. ರಸ್ತೆ ಮಾರ್ಗವಾಗಿ ಬರುವವರಿಗೂ ವಿವಿಧ ರಾಜ್ಯಗಳ ಎಲ್ಲ ನಗರಗಳಿಂದ ಬಸ್‌ಗಳ ಸೌಕರ್ಯವಿದೆ.